# ಅನ್ನದ ರೂಪಾಂಶ ಬೇರೆ, ಗುಣಾಂಶ ಬೇರೆ!

ನಿಮ್ಮ ಆಹಾರದಲ್ಲಿ ವಿಷವಿದೆಯೆ?

ಅದೊಂದು ಅಂತಾರಾಷ್ಟ್ರೀಯ ವಿಜ್ಞಾನ ಸಮ್ಮೇಳನ. ಊಟದ ವಿರಾಮದಲ್ಲಿ ಇಬ್ಬರು ವಿಜ್ಞಾನಿಗಳು ಗಂಭೀರ ಚರ್ಚೆಯಲ್ಲಿ ತೊಡಗಿದ್ದರು. ಮುಂದೆ ಚೌಕಾಕಾರದ ಹಂದಿಯನ್ನು ಸೃಷ್ಟಿಸಿದರೆ ಹೇಗೆಂಬುದೇ ಅವರ ಸಂವಾದದ ಸಾರ. ಕಲ್ಲಂಗಡಿ ಮಿಡಿ ಇರುವಾಗಲೇ ಅದರ ಮೇಲೆ ಚೌಕಾಕಾರದ ಪಾರದರ್ಶಕ ಪ್ಲಾಸ್ಟಿಕ್ ಹೊದಿಕೆ ಇರಿಸಿ ಅದೇ ಆಕಾರದಲ್ಲಿ ಅದನ್ನು ಬೆಳೆಸಿದಾಗ ಅದರ ಹೊಸ ಆಕಾರ ಬಳಕೆದಾರರಿಗೆ ಇಷ್ಟವಾಯಿತು. ಚೌಕದ, ಹೃದಯಾಕಾರದ, ಗೋಲಾಕಾರದ, ಹೀಗೆ ಬಹುರೂಪಿ ಕಲ್ಲಂಗಡಿಗಳು ಈಗ ಮಾರುಕಟ್ಟೆಯಲ್ಲಿ ಲಭ್ಯ. ಪ್ರಯೋಗಶೀಲ ಕೃಷಿಕರ ಆದಾಯವೂ ಏರಿತು. ಲಾರಿಯಲ್ಲಿ ಲೋಡು ಮಾಡುವುದು ಸುಲಭ ಎಂದರು ಚಾಲಕರು. ಜೋಡಿಸುವುದು ಇನ್ನೂ ಸಲೀಸು ಎಂದರು ಹಣ್ಣಿನಂಗಡಿಯ ಮಾಲೀಕರು. ತಿನ್ನುವವರಿಗೂ ಇಷ್ಟವಾಯಿತು. ಮುಂದೆ ಚೌಕಾಕಾರದ ಹಂದಿಯನ್ನು ಸೃಷ್ಟಿಸುವ ಉದ್ದೇಶವೂ ಇದೇ ಇರಬಹುದು. ಸಾಗಾಣೆ ಅನುಕೂಲ, ನೋಡಲು ಆಕರ್ಷಕ! ಹೇಗಿದೆ ವಿಜ್ಞಾನ?

ಚೌಕದ ಕಲ್ಲಂಗಡಿಯಾಗಲಿ, ಬೀಜವೇ ಇಲ್ಲದ ದ್ರಾಕ್ಷಿಯಾಗಲೀ ತಮ್ಮನ್ನು ಎಂದೂ ಹೊಸ ಹೊಸ ರೂಪ ಚೌಕದಲ್ಲಿ ಸೃಷ್ಟಿಸಿ ಎಂದು ಎಲ್ಲೂ ಹೇಳಿಲ್ಲ. ಅವುಗಳನ್ನು ಬಿತ್ತುವ, ಬೆಳೆಯುವ, ಬಳಸುವ ಮನಸ್ಸಿನ ವಿಕೃತಿಗಳು ಇವೆಲ್ಲ. ನಮಗಿಂದು ಬೇಕಾಗಿರುವುದು ಆಹಾರ ವಸ್ತುಗಳ ರೂಪಾಂಶಗಳೇ ಹೊರತು ಗುಣಾಂಶಗಳಲ್ಲ. ಯಾವುದೇ ಸಸ್ಯ-ಧಾನ್ಯ ಮೂಲಗಳು ಹೊಟ್ಟೆ ತುಂಬಿಸುವ ಆಹಾರ ಮೂಲವಾಗಿದ್ದಾಗ ರೂಪ, ರುಚಿ, ಗಾತ್ರದ ಬಗ್ಗೆ ಅಗತ್ಯಗಳಿರಲಿಲ್ಲ. ಯಾವಾಗ ಅವು ಆದಾಯ, ದುಡ್ಡು ಸುರಿಯುವ ಬೆಳೆಯಾದವೋ ಆಗ ಅವುಗಳ ಗಾತ್ರ-ರೂಪ ಮುಖ್ಯವಾದವು. ಭತ್ತ, ಜೋಳ, ಗೋಧಿ, ಶೇಂಗಾ ಯಾವುದೇ ಇರಲಿ ಅವು ಎಷ್ಟು ಹಿಟ್ಟು ಉತ್ಪಾದಿಸುತ್ತವೆ ಎಂಬುದೇ ಮುಖ್ಯವಾಯಿತು.

ಇಂದು ಚೀನಾವೋ ಜರ್ಮನಿಯೋ ಅಮೆರಿಕವೋ ಯಾವುದೇ ದೇಶವಿರಲಿ, ಅಲ್ಲಿ ಉತ್ಪಾದನೆಗೊಂಡ ಆಟಿಕೆಯೋ ಟೀವಿಯೋ ಏನೋ ಒಂದು ನಮ್ಮ ದೇಶಕ್ಕೆ ಬರುವುದಕ್ಕೂ ಅದೇ ದೇಶದಿಂದ ಬರುವ ಬದನೆಯೋ, ಸೋಯಾಬೀನೋ ಒಂದು ಅದರ ಬಳಕೆಗೂ ವ್ಯತ್ಯಾಸವಿದೆ. ಆಟಿಕೆಗಳು ಸೃಷ್ಟಿಸುವ ಅವಾಂತರ ಬೌದ್ಧಿಕವಾದರೆ, ಆಹಾರ ಸೃಷ್ಟಿಸುವ ಅವಾಂತರ ದೈಹಿಕವಾದುದು. ಕೃಷಿ ಹುಟ್ಟುವಳಿಯ ಹೊರಮೈಯ ಮೇಲೆಯೇ ಕಣ್ಣಿಟ್ಟ ನಮಗೆ ಒಳಗಣ್ಣು ತೆರೆಯುವುದೇ ಇಲ್ಲ. ಉದಾಹರಣೆಗೆ ಮಳೆಗಾಲ ಆರಂಭ ಅಂದರೆ ಮೇ-ಜೂನ್ ತಿಂಗಳಲ್ಲಿ ಬೆಳೆಯುವಂತೆಯೇ ನವೆಂಬರ್ ತಿಂಗಳಲ್ಲೂ ಶೇಂಗಾ ಬೆಳೆಯುತ್ತದೆ. ಬೇಕಾದರೆ ಪಂಪು ನೀರು ಬಳಸಿ ಮಗದೊಂದು ಬೆಳೆಯೂ ತೆಗೆಯಬಹುದು. ನೋಡುವಾಗ ಗಾತ್ರ ರೂಪ ಒಂದೇ ರೀತಿ ಇರುತ್ತದೆ. ಆದರೆ ಶೇಂಗಾದ ಸಿಪ್ಪೆ ತಿರುಳಲ್ಲಿರುವ ಗುಣಾಂಶದಲ್ಲಿ ವ್ಯತ್ಯಾಸಗಳಿರುತ್ತವೆ. ಇದು ಯಾರ ಗಮನಕ್ಕೂ ಬಾರದ ಸತ್ಯ ಸಂಗತಿ.

ರುಚಿಸ್ವಾದಗಳನ್ನು ಗುರುತಿಸುವಲ್ಲಿ ನಮ್ಮ ಪಂಚೇಂದ್ರಿಯಗಳು ಸೋತದ್ದು ತೀರಾ ಇತ್ತೀಚೆಗೇನಲ್ಲ. ಕಾಲದಿಂದ ಕಾಲಕ್ಕೆ ಇದು ಹಿಗ್ಗುತ್ತಾ ಬಂತು. ಮಾಧ್ಯಮ, ಜಾಹೀರಾತು, ಮಾಲ್‌ಕಲ್ಚರ್ ಎಲ್ಲವನ್ನೂ ಕುಲಗೆಡಿಸಿತು. ತಿನ್ನುವ ಅಕ್ಕಿ-ಉಪ್ಪಿಗೆ ಜಾಹೀರಾತು ಕೊಡುವ ಕಾಲದಲ್ಲಿ ನಾವಿದ್ದೇವೆ. ಪ್ರಚಾರ, ವೈಭವಗಳ ಮೇಲೆ ನಾಗರಿಕ ಬದುಕು ನಿಂತಿದೆ. ಜೀವನದ ರಂಗು, ಸೌಂದರ್ಯ, ರೂಪಮೂಲದಿಂದಲೇ ಕೃಷಿ ಹುಟ್ಟುವಳಿಗೂ ಈ ಪ್ರಜ್ಞೆ ಜಿಗಿದಿದೆ. ಭತ್ತದ ಬೀಜಕ್ಕೇ ಬಂಗಾರದ ಬಣ್ಣ ತುಂಬಿ ಚಿನ್ನದ ಬಣ್ಣದ ಅಕ್ಕಿ ಸೃಷ್ಟಿಸುವುದು ಅಥವಾ ಅಕ್ಕಿ ಯಾವ ಬಣ್ಣದ್ದೇ ಇರಲಿ, ಅದನ್ನು ಬಂಗಾರದಂಥ ಚೀಲದಲ್ಲಿ ತುಂಬುವುದು ಎರಡೂ ಒಂದೇ. ಬಣ್ಣ, ರುಚಿಯೇ ಮಾನದಂಡವಾಗಿ ದೇಹಾರೋಗ್ಯಕ್ಕಿಂತ ಅರ್ಥಾರೋಗ್ಯಕ್ಕೆ ಮಹತ್ವ ಕೊಡುವ ಕಾಲದಲ್ಲಿ ನಾವಿದ್ದೇವೆ.

ನಗರ ಕೇಂದ್ರಿತ ನೂರಕ್ಕೆ ತೊಂಬತ್ತರಷ್ಟು ಮಂದಿ ಅನ್ನ-ತರಕಾರಿ ಮೂಲದ ಬಗ್ಗೆ, ಅವು ಹೇಗೆ ಬರುತ್ತವೆ, ಹೇಗೆ ಉಳಿಯುತ್ತವೆ ಎಂಬುದರ ಬಗ್ಗೆ ಯೋಚಿಸಲಾರರು. ವಿಷ, ಬಣ್ಣ, ರೂಪ ಹಚ್ಚಿಕೊಂಡು ರಂಗಸ್ಥಳದಲ್ಲಿ ಕುಣಿಯುವ ಈ ಆಹಾರ ವಸ್ತುಗಳ ನಿಜವಾದ ನೇಪಥ್ಯವನ್ನು ನೋಡಲಾರರು. ಹುಳಬಿದ್ದ ಸೊಪ್ಪು, ಮುರುಟಿದ ಸೌತೆ, ಒಡೆದ ಬಾಳೆಕಾಯಿಗಳಿಗೆ ಬೇಡಿಕೆ ಇಲ್ಲ ಎಂದಾದಾಗ ಗುಣಾಂಶದ ವಿಷಯದಲ್ಲಿ ಬೆಳೆಗಾರನಿಗೂ ನಿರಾಸಕ್ತಿ ಹುಟ್ಟಿತು.

ರೂಪ ಮತ್ತು ಅರ್ಥ ನಮ್ಮ ಅಂತರ್‌ದೃಷ್ಟಿಯನ್ನು ಬಲಹೀನಗೊಳಿಸಿದೆ. ಒಳಗಣ್ಣನ್ನು ಬಲಗೊಳಿಸಬೇಕಾದ ಶಿಕ್ಷಣ ದಿನೇ ದಿನೇ ಸೋಲುತ್ತಿದೆ. ಪ್ರಕೃತಿಯನ್ನು ಅರ್ಥೈಸುವ ಅರ್ಥಶಾಸ್ತ್ರ ಹಣವನ್ನು ಶ್ರೀಮಂತಿಕೆಯನ್ನು ಅರ್ಥೈಸುವ ಅರ್ಥಶಾಸ್ತ್ರವಾಗಿ ಹೋಗಿದೆ.



ಸಾವಯವದ ಇಡೀ ಯಶಸ್ಸು ಇರುವುದು ಅದನ್ನು ಬೆಳೆದಾತ ಬಳಕೆದಾರನಿಗೆ ಮುಖಾಮುಖಿಯಾಗುವುದರಲ್ಲಿ. ಇಲ್ಲಿ ವಸ್ತುವಿನ ರೂಪ, ಬೆಲೆ ಮಾತ್ರ ಯಾವತ್ತೂ ಮೌಲ್ಯ ನಿರ್ಧಾರದ ಮಾನದಂಡವಲ್ಲ

